1.ಅಧಿಕೃತ ದಾಖಲೆಗಳನ್ನು ಅರ್ಜಿಯ ಜೊತೆ ಹಾಜರಿಪಡಿಸದೇ ಇರುವುದು.

2. ವಿನ್ಯಾಸವನ್ನು ಅಭಿವೃದ್ಧಿಗೊಳಿಸಿ ಮಹಾನಗರಸಭೆಗೆ ಹಸ್ತಾಂತರ ಮಾಡದೇ ಇರುವುದು.

3. ನಿರ್ದಿಷ್ಟವಾದ ಪ್ರಕರಣಗಳಲ್ಲಿ ಆಜೂ, ಬಾಜೂ ಆಸ್ತಿ ಮಾಲೀಕರ ಒಪ್ಪಿಗೆ ಪತ್ರ ಹಾಜರುಪಡಿಸದೇ ಇರುವುದು.

4. ಪ್ರಸ್ತಾವನೆಗಳು ನಿಯೋಜಿತ ನಕ್ಷೆಗಳ ನಿಬಂಧನೆಗೆ ವ್ಯತಿರಿಕ್ತವಾಗಿರುವುದು.

5. ಮಹಾನಗರಸಭೆಗೆ ಆಸ್ತಿ ಕರ ಬಾಕಿ ಉಳಿದಿರುವುದು.

6. ಅಭಿವೃದ್ಧಿ ಶುಲ್ಕ ತುಂಬದೆ ಇರುವುದರಿಂದ ಹಾಗೂ ತುಂಬುವಲ್ಲಿ ಅರ್ಜಿದಾರರು ತಡ ಮಾಡುವುದು.

ವಿಷಯ :- ಹುಬ್ಬಳ್ಳಿ ನಗರದಲ್ಲಿ ಕೊಳವೆ ಬಾವಿಗಳನ್ನು ಕೊರೆಯುವ ಬಗ್ಗೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2361 (2582)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಇಲ್ಲಿಯವರೆಗೆ ಕೊರೆದ ಬಾವಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸುಸ್ಥಿತಿಯಲ್ಲಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಸುಸ್ಥಿತಿಯಲ್ಲಿ ಇರದ ಕೊಳವೆ ಬಾವಿಗಳ ದುರಸ್ತಿಯ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ವರ್ಷ ಎಷ್ಟು ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಲಾಗಿದೆ (ಅವುಗಳ ವಿವರ ನೀಡುವುದು)

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಹುಬ್ಬಳ್ಳಿ ನಗರದಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ- 538

ಸುಸ್ಥಿತಿಯಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ-489

ಹುಬ್ಬಳ್ಳಿಯಲ್ಲಿ ಕೊಳವೆ ಬಾವಿಗಳನ್ನು ರೀಪೇರಿ ಮಾಡಲು 5 ಜನ ಸಿಬ್ಬಂದಿ ಹಾಗೂ 1 ವಾಹನ ಇದ್ದು, ಪ್ರತಿದಿನ ಸುಸ್ಥಿತಿಯಲ್ಲಿರದ ಕೊಳವೆ ಬಾವಿಗಳನ್ನು ರಿಪೇರಿ ಮಾಡಲಾಗುತ್ತಿದೆ.

ಆ) ಈ ವರ್ಷ 9 ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಲಾಗಿದೆ.

ಹುಬ್ಬಳ್ಳಿ ವಿಭಾಗ

1) ರಾಜೇಂದ್ರ ಪ್ರಸಾದ ಕಾಲನಿ
2) ಮ್ಯಾಂಗನೀಜ ಪ್ಲಾಟ್
3) ಮಾಲಾಲಿ ಜೋಪಡಿ ಒಳಬದಿಗೆ
4) ಹರಪನಹಳ್ಳಿ ಓಣಿ
5) ಗೋಕುಲ ರಸ್ತೆ ಗಾಂಧೀನಗರ ಹೌ. ಬೋರ್ಡ್ ಕಾಲನಿ ಇಡಿಬ್ಲ್ಯೂಎಸ್ ಮನೆ ಹತ್ತಿರ
6) ಲಿಂಗರಾಜ ನಗರ
7) ಶರಾವತಿ ನಗರ
8) ನೇಕಾರ ನಗರ
9) ಗೋಕುಲ ಗ್ರಾಮ

ವಿಷಯ :- ಮಹಾನಗರ ಸಭೆಯ ಸಿಬ್ಬಂದಿಯ ವರ್ಗಾವಣೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2363 (2974)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಹಾ ನಗರಸಭೆಗಳಲ್ಲಿಯ ನೌಕರದಾರರಿಗೆ ಮತ್ತು ಅಧಿಕಾರಿಗಳಿಗೆ ಹೆಚ್ಚಿನ ದಕ್ಷತೆ ಮೂಡಿಸುವ ದೃಷ್ಟಿಯಿಂದ ಒಂದು ಮಹಾನಗರಸಭೆಯಿಂದ ಇನ್ನೊಂದು ಮಹಾನಗರಸಭೆಗೆ ವರ್ಗ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ ಆದನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಇದೆ.

ಆ) ಆದಷ್ಟು ಜಾಗ್ರತೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಆಡಳಿತಾಧಿಕಾರಿಗಳನ್ನು ನೇಮಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2364 (3017)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?